ಈ) ಈ ಕೆರೆಯನ್ನು ಶುದ್ಧೀಕರಣಗೊಳಿಸಿ ಪ್ರವಾಸಿಗಳ ಆಕರ್ಷಕ ಸ್ಥಳವನ್ನಾಗಿ ಪರಿವರ್ತಿಸಲು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಇನಸ್ಪೇಟ್ ಲಾಟರಿ ಹಾವಳಿ.

709 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬೇರೆ ರಾಜ್ಯಗಳು ಇನಸ್ಪೆಂಟ್ ಲಾಟರಿ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ಸ್ವಲ್ಪಮಟ್ಟಿಗೆ ಇದೆ.

ಆ) ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಸಚಿವರ ವಾಹನಗಳ ಮೇಲೆ ರಾಷ್ಟ್ರಧ್ವಜ ಮತ್ತ ಕೆಂಪು ದೀಪ ಕುರಿತು

711 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಮುಖ್ಯಮಂತ್ರಿಗಳಿಗೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಾವ ನಿಯಮಾವಳಿಯಡಿ ಸಚಿವ ಸಂಪುಟದ ಸದಸ್ಯರು, ವಿಧಾನಪರಿಷತ್ತಿನ ಸಭಾಪತಿಗಳು ಮತ್ತು ವಿಧಾನಸಭೆಯ ಅಧ್ಯಕ್ಷರು ತಮ್ಮ ಅಧಿಕೃತ ವಾಹನದ ಮೇಲೆ ರಾಷ್ಟ್ರ ಧ್ವಜವನ್ನು ಹಾಗೂ ಕೆಂಪು ದೀಪವನ್ನು ಉಪಯೋಗಿಸುತ್ತಿದ್ದಾರೆ?

ಆ) ಯಾವ ನಿಯಾಮಾವಳಿಯಲ್ಲಿ ಪೋಲೀಸ್ ಇಲಾಖೆಯಲ್ಲಿ ಇಲಾಖಾ ಮುಖ್ಯಸ್ಥರಿಂದ ಹಿಡಿದು ಇನ್ಸಪೆಕ್ಟರರವರೆಗೆ ಹಾಗೂ ಜಿಲ್ಲಾಧಿಕಾರಿಗಳು ತಮ್ಮ ವಾಹನದ ಮೇಲೆ ಕೆಂಪು ದೀಪವನ್ನು ಉಪಯೋಗಿಸಲು ಅರ್ಹರಿರುತ್ತಾರೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಭಾರತದ ಧ್ವಜ ಸಂಹಿತೆಯ ಸಕ್ಷನ್ 10(4) ರಂತೆ ಸಚಿವಸಂಪುಟದ ಸದಸ್ಯರು, ವಿಧಾನ ಪರಿಷತ್ತಿನ ಸಭಾಪತಿಗಳು ಹಾಗೂ ವಿಧಾನ ಸಭೆಯ ಅಧ್ಯಕ್ಷರು ತಮ್ಮ ಅಧಿಕೃತ ವಾಹನದ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಲು ಅರ್ಹರಿರುತ್ತಾರೆ. 1989ರ ಕೇಂದ್ರ ವಾಹನಗಳ ನಿಯಮ 108ರ ಕ್ಲಾಸ್ (iii)ರಲ್ಲಿ ಅಧಿದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಸರ್ಕಾರವು ದಿ: 9-12-94ರ ಅಧಿಸೂಚನೆ ಸಂಖ್ಯೆ ಹೆಚ್‌ಟಿಡಿ 180 ಟಿವಿಂಎ 94 ರಲ್ಲಿ ಅವರುಗಳು ತಮ್ಮ ಅಧಿಕೃತ ವಾಹನಗಳ ಮೇಲೆ ಕೆಂಪುದೀಪವನ್ನು ಅಳವಡಿಸಲು ಅನುಮತಿ ನೀಡಲಾಗಿದೆ.